**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ಕೋರ್ಟ,**
**ಬಸವನ ಬಾಗೇವಾಡಿ.**

ಸಿಸಿ ನಂಃ 645/2023

ಸಿ.ಡಬ್ಲ್ಯೂ: 20 ಪಿ.ಡಬ್ಲೂ 9 :

| | | |
|---|---|---|
| ಸಾಕ್ಷಿದಾರರ ಹೆಸರು | ಡಾ ಮಿನಾಕ್ಷಿ ಸೊನ್ನದ | |
| ತಂದೆ/ಗಂಡನ ಹೆಸರು | ಸಿದ್ದಪ್ಪ | |
| ವಯಸ್ಸು | 43 | ವರ್ಷ |
| ಉದ್ಯೋಗ | ವೈದ್ಯಾಧಿಕಾರಿಗಳು ಸಂಜೀವಿನಿ ಆಸ್ಪತ್ರೆ ವಿಜಯಪೂರ | |
| ವಾಸಸ್ಥಳ | ವಿಜಯಪೂರ | |

**ಸಾಕ್ಷಿಯನ್ನು ಇಂದು ದಿನಾಂಕಃ 11.05.2026 ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು.**
**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದ**

1. ನಾನು 2013 ರಿಂದ ಇಲ್ಲಿಯವರೆಗೆ ವಿಜಯಪೂರದ ಸಂಜೀವಿನಿ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ.

2. ದಿನಾಂಕ:15.10.2022 ರಂದು ಸಂಜೆ 08.30 ಗಂಟೆಗೆ ಚಾಸಾ-1 ರವರು ತಮ್ಮ ಚಿಕ್ಕಪ್ಪನಾದ ಮಲ್ಲಪ್ಪ ಶಿರಶ್ಯಾಳ ಎಂಬುವವರೊಂದಿಗೆ ಅಪಘಾತದ ಹಿನ್ನೆಲೆಯಲ್ಲಿ ನನ್ನ ಮುಂದೆ ಹಾಜರಾಗಿದ್ದು, ನಾನು ಅವರನ್ನು ಪರಿಕ್ಷಿಸಿದಾಗ,

1. ಬಲ ಮೊಣಕಾಲಿಗೆ 3X2X1 ಸೆಂಟೀ ಮೀಟರ್ ಹರಿದ ಗಾಯ ಮತ್ತು ಬಾವು,

2. ಬಲ ಮುಂಗೈ ಮೇಲೆ 3X1 ಸೆಂಟೀ ಮೀಟರ್ ಹಾಗೂ 2X1 ಸೆಂಟೀ ಮೀಟರ್ ತರಚಿದ ಗಾಯಗಳು ಮತ್ತು ಬಾವು,

3. ನಾನು ಚಾಸಾ-1 ರವರಿಗೆ ಎಕ್ಸ್ ರೇನ್ನು ಮಾಡಿಸಿ ನಾನು ಎಕ್ಸ್ ರೇ ನ್ನು ಪರಿಶೀಲಿಸಲಾಗಿ ಚಾಸಾ-1 ರವರಿಗೆ ಯಾವುದೇ ಮೂಳೆ ಮುರಿತ ಗಾಯವಾಗಿರುವುದು ಕಂಡು ಬಂದಿರುವುದಿಲ್ಲ.

4. ನಾನು ಮೇಲೆ ಹೇಳಿದ ಎಲ್ಲಾ ಗಾಯ ಸಾಧಾರಣ ಸ್ವರೂಪದ ಗಾಯ ಆಗಿರುತ್ತವೆ. ಈ ಕುರಿತು ನಾನು ಗಾಯದ ಪ್ರಮಾಣ ಪತ್ರವನ್ನು ನೀಡಿದ್ದು, ಸದರಿ ಗಾಯದ ಪ್ರಮಾಣ ಪತ್ರವನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ನಿಪಿ-11 ಎಂದು ಹಾಗೂ ಸಾಕ್ಷಿ ಸಹಿಯನ್ನು ನಿಪಿ-11(ಎ) ಎಂದು ಗುರುತಿಸಲಾಯಿತು.

5. ನಿಪಿ-11 ರಲ್ಲಿ ನಮೂದಿಸಿದ ಗಾಯಗಳು ಒಬ್ಬ ವ್ಯಕ್ತಿಗೆ ರಸ್ತೆಯ ಅಪಘಾತದಲ್ಲಿ ಆಗುವ ಸಾಧ್ಯತೆ ಇರುತ್ತದೆ.

## ಪಾಟೀ ಸವಾಲು ಆರೋಪಿ ಪರ ಶ್ರೀ.ವಿ.ಜಿ.ಕೆ ವಕೀಲರ ಪರವಾಗಿ ಶ್ರೀ ಸಿ.ಟಿ.ಬಿ.ವಕೀಲರಿಂದ:

1. ಚಾಸಾ-1 ರವರಿಗೆ ಅಪಘಾತವಾಗಿರುವ ವಿಷಯವು ಚಾಸಾ-1 ರವರು ಹೇಳಿರುವುದರಿಂದ ನನಗೆ ಗೊತ್ತಾಗಿರುತ್ತದೆ. ಸಾಮಾನ್ಯವಾಗಿ ಒಬ್ಬ ವ್ಯಕ್ತಿಯು ನಡೆದುಕೊಂಡು ಹೋಗುವಾಗ ಹೋರಟಾದ ಪ್ರದೇಶದ ಮೇಲೆ ಬಿದ್ದರೆ ನಿ.ಪಿ.-11 ರಲ್ಲಿ ನಮೂದಿಸಿದ ಗಾಯಗಳು ಆಗುತ್ತವೆ ಎಂದರೆ ಸರಿ. ನಾನು ಗಾಯಾಳುಗಳನ್ನು ಪರೀಕ್ಷಿಸುವುದು ಮಾತ್ರ ಕರ್ತವ್ಯ ಎಂದರೆ ಸರಿ. ನಾನು ಚಾಸಾ-1 ರವರಿಗೆ ಸಹಾಯ ಮಾಡಲು ಸುಳ್ಳು ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ,

1 ನೇ ಹೆಚ್ಚುವರಿ ಸಿವಿಲ್ ವ ಜೆ ಎಮ್ ಎಫ್ ಸಿ ನ್ಯಾಯಾಧೀಶರು,
ಬಸವನ ಬಾಗೇವಾಡಿ.